## ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 806
2. ಮಾನ್ಯ ಸದಸ್ಯರ ಹೆಸರು : ಶ್ರೀ ಮೋಹನ ಕುಮಾರ್ ಕೊಂಡಜ್ಜಿ
3. ಉತ್ತರಿಸಬೇಕಾದ ದಿನಾಂಕ : 20.09.2022
4. ಉತ್ತರಿಸುವ ಸಚಿವರು : ಕೈಮಗ್ಗ ಮತ್ತು ಜವಳಿ, ಕಬ್ಬು ಅಭಿವೃದ್ಧಿಹಾಗೂ ಸಕ್ಕರೆ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಉಡುಪಿ ಜಿಲ್ಲೆಯ ದಕ್ಷಿಣ ಕನ್ನಡ ಜಿಲ್ಲೆ ಸಹಕಾರಿ ಸಕ್ಕರೆ ಕಾರ್ಖಾನೆ ಬ್ರಹ್ಮಾವರ ಕಾರ್ಖಾನೆಯ ಯಂತ್ರೋಪಕರಣಗಳು ಹಾಳಾಗಿ ತುಕ್ಕು ಹಿಡಿಯುತ್ತಿರುವುದರಿಂದ ಮಾರಾಟ ಮಾಡಲು ಸರ್ಕಾರ ಅನುಮತಿಯನ್ನು ನೀಡಲಾಗಿದೆಯೇ: | ಉಡುಪಿ ಜಿಲ್ಲೆಯ ದಕ್ಷಿಣ ಕನ್ನಡ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ ಬ್ರಹ್ಮಾವರ, ಉಡುಪಿ ಜಿಲ್ಲೆ, ಈ ಕಾರ್ಖಾನೆಯು ತೀವ್ರವಾದ ಆರ್ಥಿಕ ತೊಂದರೆಯಿಂದಾಗಿ ಹಾಗೂ ಕಬ್ಬಿನ ಕೊರತೆಯಿಂದಾಗಿ 2003-04ನೇ ಸಾಲಿನಿಂದ ಕಾರ್ಖಾನೆಯಲ್ಲಿ ಕಬ್ಬು ಅರೆಯುವಿಕೆ ಕಾರ್ಯವನ್ನು ಸ್ಥಗಿತಗೊಳಿಸಿರುತ್ತದೆ.<br><br>ಈ ಕಾರ್ಖಾನೆಯು ಕಾರ್ಯನಿರ್ವಹಿಸದೆ ಸ್ಥಗಿತಗೊಂಡು 18 ವರ್ಷಗಳಾಗಿರುವುದರಿಂದ ಕರಾವಳಿ ತೀರದ ಉಪ್ಪು ನೀರಿನ ವಾತಾವರಣದಿಂದಾಗಿ ಕಾರ್ಖಾನೆಯ ಕಬ್ಬಿಣದ ಯಂತ್ರೋಪಕರಣಗಳು ಸಂಪೂರ್ಣ ತುಕ್ಕು ಹಿಡಿದು ಹಾಳಾಗಿದ್ದು ಉಪಯೋಗಕ್ಕೆ ಬಾರದ ಸ್ಥಿತಿಯಲ್ಲಿವೆ ಈ ತುಕ್ಕು ಹಿಡಿದಿರುವ ಯಂತ್ರೋಪಕರಣಗಳನ್ನು ಹಾಗೇ ಇಟ್ಟುಕೊಂಡಲ್ಲಿ ಮುಂದೆ ಮಾರಾಟ ಮಾಡುವುದಕ್ಕೂ ಸಹ ಯೋಗ್ಯವಾಗುವುದಿಲ್ಲ ಮತ್ತು ಬೆಲೆ ಬಾಳುವುದಿಲ್ಲ.<br><br>ಆದ್ದರಿಂದ ಕಾರ್ಖಾನೆಯ ಅನುಪಯುಕ್ತ ಹಾಗೂ ತುಕ್ಕು ಹಿಡಿದಿರುವ ಸಂಪೂರ್ಣ ಯಂತ್ರೋಪಕರಣಗಳನ್ನು ಮತ್ತು ಕಟ್ಟಡವನ್ನು ಟೆಂಡರ್ ಮೂಲಕ ಮಾರಾಟ ಮಾಡಲು ಅನುಮತಿ ನೀಡುವಂತೆ ಕಾರ್ಖಾನೆಯವರು ದಿನಾಂಕ:29.01.2021ರಂದು ಕೋರಿದ್ದರು ಈ ವಿಷಯದ ಸಂಬಂಧ ಕಾರ್ಖಾನೆಯ ಆಡಳಿತ ಮಂಡಳಿಯೂ ಸಹ ನಿರ್ಣಯವನ್ನು ಕೈಗೊಂಡಿರುತ್ತದೆ.<br><br>ಕಾರ್ಖಾನೆಯ ಪ್ರಸ್ತಾವನೆಯನ್ನು ಪರಿಶೀಲಿಸಿ, ಕಾರ್ಖಾನೆಯಲ್ಲಿ ತುಕ್ಕು ಹಿಡಿದು ಹಾಳಾಗುತ್ತಿರುವ ಹಳೆಯ ಯಂತ್ರೋಪಕರಣಗಳು ಹಾಗೂ ನಿರುಪಯುಕ್ತ ಸಾಮಗ್ರಿಗಳನ್ನು ಟೆಂಡರ್ ಕಂ ಹರಾಜು ಮೂಲಕ ಮಾರಾಟ ಮಾಡಲು ಕೆಲವೊಂದು ಷರತ್ತುಗಳಿಗೆ ಒಳಪಟ್ಟು ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶನಾಲಯದ ಪತ್ರ ದಿನಾಂಕ:02.09.2021ಲ್ಲಿ ಅನುಮತಿ ನೀಡಿ, ಟೆಂಡರ್ ಪ್ರಕ್ರಿಯೆಯಲ್ಲಿ ಪಾರದರ್ಶಕ ಕಾಯ್ದೆ ಮತ್ತು ನಿಯಮಗಳನ್ನು ಪಾಲಿಸಲು ಕಾರ್ಖಾನೆಗೆ ಸೂಚನೆ ನೀಡಲಾಗಿರುತ್ತದೆ. |
| (ಆ) | ಕಾರ್ಖಾನೆಯ ಟೆಂಡರ್ ಪ್ರಕ್ರಿಯೆಯನ್ನು ಪಾರದರ್ಶಕವಾಗಿ ಮತ್ತು ಸುಗಮವಾಗಿ ನಡೆಸಲು ಪ್ರೀಬಿಡ್ ತಾಂತ್ರಿಕ ಮತ್ತು ಆರ್ಥಿಕ ಬಿಡ್ಡುಗಳನ್ನು ನಡೆಸಲು ವಿಷಯ ತಜ್ಞರೊಂದಿಗೆ ತಾಂತ್ರಿಕ ಸಮಿತಿ ರಚಿಸಲಾಗಿದೆಯೇ: | ಟೆಂಡರ್ ಪ್ರಕ್ರಿಯೆಯನ್ನು ಸುಗಮವಾಗಿ ನಿರ್ವಹಿಸಲು ಹಾಗೂ ಪಾರದರ್ಶಕತೆ ಕಾಯ್ದುಕೊಳ್ಳುವ ದೃಷ್ಟಿಯಿಂದ ಪ್ರಿಬಿಡ್, ತಾಂತ್ರಿಕ ಮತ್ತು ಆರ್ಥಿಕ ಬಿಡ್ಡುಗಳನ್ನು ನಡೆಸಲು ವಿಷಯ ತಜ್ಞರನ್ನೊಳಗೊಂಡ ತಾಂತ್ರಿಕ ಸಮಿತಿಯನ್ನು ರಚಿಸಿ ನಿರ್ವಹಿಸಲು ಸಕ್ಕರೆ ನಿರ್ದೇಶನಾಲಯದಿಂದ ಕಾರ್ಖಾನೆಗೆ ಸೂಚಿಸಲಾಗಿರುತ್ತದೆ. ಅದರಂತೆ ದಿನಾಂಕ:07.09.2021 ರಂದು ಜರುಗಿದ ಕಾರ್ಖಾನೆಯ ಆಡಳಿತ ಮಂಡಳಿ ಸಭೆಯ ನಿರ್ಣಯ ನಂ.03ರಲ್ಲಿ ದಕ್ಷಿಣ ಕನ್ನಡ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ, ಬ್ರಹ್ಮಾವರ ಈ ಕಾರ್ಖಾನೆಯ ತುಕ್ಕು ಹಿಡಿದು ಹಾಳಾಗುತ್ತಿರುವ ಕಟ್ಟಡ ಮತ್ತು ಯಂತ್ರೋಪಕರಣಗಳನ್ನು ಟೆಂಡರ್ ಕಂ ಹರಾಜು ಮೂಲಕ ಮಾರಾಟ ಮಾಡುವುದಕ್ಕೆ ಸಂಬಂಧಿಸಿದಂತೆ ತಾಂತ್ರಿಕ ಆರ್ಥಿಕ ಬಿಡ್ಡುಗಳನ್ನು ನಡೆಸಲು ಈ ಕೆಳಗಿನ ಸದಸ್ಯರನ್ನೊಳಗೊಂಡ ತಾಂತ್ರಿಕ ಸಮಿತಿಯನ್ನು ರಚಿಸಲಾಗಿರುತ್ತದೆ. |

...2

<table>
<tr>
<td></td>
<td>ರಚಿಸಿದ್ದಲ್ಲಿ, ತಾಂತ್ರಿಕ ಸಮಿತಿಯು ಎಷ್ಟು ಸಭೆಗಳನ್ನು ನಡೆಸಲಾಗಿದೆ ಮತ್ತು ಸಮಿತಿಯು ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆಯೇ? (ತಾಂತ್ರಿಕ ಸಮಿತಿಯ ಸದಸ್ಯರ ವಿಳಾಸ ಮತ್ತು ಅವರು ನೀಡಿದ ಎಲ್ಲಾ ಸಭೆಯ ಪೂರ್ಣ ವರದಿಯ ಪ್ರತಿಯನ್ನು ನೀಡುವುದು)</td>
<td>
1. ಶ್ರೀ ಮೋಹನ್ ಕುಮಾರ್ ಛಬ್ಬಿ- ಚಾರ್ಟರ್ಡ್ ಇಂಜಿನಿಯರ್ ಮತ್ತು ಮೌಲ್ಯ ಮಾಪಕರು.<br>
2. ಶ್ರೀ ಬಿ.ಸಿ. ರಮೇಶ್- ಕೆ.ಎಸ್.ಆರ್.ಟಿ.ಸಿ. ಇಲಾಖೆಯ ನಿವೃತ್ತ ಸೀನಿಯರ್ ಇಂಜಿನಿಯರ್.<br>
3. ಶ್ರೀ ಆರ್.ಬಿ. ಖಂಡಗಾವೆ, ನಿರ್ದೇಶಕರು, ಎಸ್. ನಿಜಲಿಂಗಪ್ಪ ಸಕ್ಕರೆ ಸಂಸ್ಥೆ, ಬೆಳಗಾವಿ.<br>
4. ಶ್ರೀ ಎಸ್.ಆರ್. ಕುಲಕರ್ಣಿ-ಸೀನಿಯರ್ ಚಾರ್ಟರ್ಡ್ ಅಕೌಂಟೆಡ್, ಧಾರವಾಡ.<br>
5. ಶ್ರೀ ಪ್ರವೀಣ್ ಬಿ. ನಾಯಕ್- ವ್ಯವಸ್ಥಾಪಕ ನಿರ್ದೇಶಕರು, ದಕ್ಷಿಣ ಕನ್ನಡ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ, ಬ್ರಹ್ಮಾವರ.<br>
ತಾಂತ್ರಿಕ ಸಮಿತಿಯು ದಿನಾಂಕ:17.09.2021, 07.10.2021, 27.10.2021,30.10.2021 ಮತ್ತು 14.06.2022 ಹಾಗೂ 15.06.2022ರಲ್ಲಿ ಒಟ್ಟು 6 ಸಭೆಗಳನ್ನು ನಡೆಸಿರುತ್ತದೆ. ಕಾರ್ಖಾನೆಯ ತಾಂತ್ರಿಕ ಸಮಿತಿಯ ಅಂತಿಮ ವರದಿಯನ್ನು ಸಕ್ಕರೆ ನಿರ್ದೇಶನಾಲಯಕ್ಕೆ ದಿನಾಂಕ:08.08.2022ರಂದು ಸಲ್ಲಿಸಿರುತ್ತದೆ.<br><br>
<u>ತಾಂತ್ರಿಕ ಸಮಿತಿ ಸದಸ್ಯರ ಹೆಸರು ಮತ್ತು ವಿಳಾಸ:</u>
<table>
<tr><td>1.</td><td>ಶ್ರೀ ಮೋಹನ್ ಕುಮಾರ್ ಛಬ್ಬಿ, ನೋಂದಾಯಿತ ಮೌಲ್ಯಮಾಪಕರು ಮತ್ತು ಚಾರ್ಟರ್ಡ್ ಇಂಜಿನಿಯರ್, #125/09 ವಿಜಯ ರಸ್ತೆ, ಧಾರವಾಡ-580001</td></tr>
<tr><td>2.</td><td>ಶ್ರೀ ಬಿ.ಸಿ. ರಮೇಶ್, ಕೆ.ಎಸ್.ಆರ್.ಟಿ.ಸಿ. ಇಲಾಖೆಯ ನಿವೃತ್ತ ಸೀನಿಯರ್ ಇಂಜಿನಿಯರ್. #116, ಕೆನರಾಬ್ಯಾಂಕ್ ಹತ್ತಿರ, ವಿಜಯನಗರ, ಹುಬ್ಬಳ್ಳಿ-5800032</td></tr>
<tr><td>3.</td><td>ಶ್ರೀ ಆರ್.ಬಿ. ಖಂಡಗಾವೆ, ನಿರ್ದೇಶಕರು, ಎಸ್. ನಿಜಲಿಂಗಪ್ಪ ಸಕ್ಕರೆ ಸಂಸ್ಥೆ, ಲಕ್ಷ್ಮಿಟೆಕ್, ಗಣೇಶಪುರ್ ರಸ್ತೆ, ಬೆಳಗಾವಿ.</td></tr>
<tr><td>4.</td><td>ಶ್ರೀ ಎಸ್.ಆರ್. ಕುಲಕರ್ಣಿ, ಎಸ್‌ಎನ್ ಅಂಡ್ ಅಸೋಸಿಯೇಟ್ಸ್ ಸೀನಿಯರ್ ಚಾರ್ಟರ್ಡ್ ಅಕೌಂಟೆಡ್, ತುಳಸಿ ಪ್ಲಾಟ್ ನಂ. 27/28 ಮಯೂರಿ ಎಸ್ಟೇಟ್, ದೇವಾಂಗ ಪೇಟೆ ರಸ್ತೆ, ಹುಬ್ಬಳ್ಳಿ-580023</td></tr>
<tr><td>5.</td><td>ವ್ಯವಸ್ಥಾಪಕ ನಿರ್ದೇಶಕರು, ದಕ್ಷಿಣ ಕನ್ನಡ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ, ಬ್ರಹ್ಮಾವರ, ಉಡುಪಿ ಜಿಲ್ಲೆ.</td></tr>
</table>
</td>
</tr>
</table>

ಸಂಖ್ಯೆ: ಸಿಐ 182 ಸಿಓಎಫ್ 2022

(ಶಂಕರ.ಬ.ಪಾಟೀಲ ಮುನೇನಕೊಪ್ಪ)
ಕೈಮಗ್ಗ ಮತ್ತು ಜವಳಿ, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ಸಚಿವರು